ಬೆಳೆಯುವಂತಹ ಕುಟುಂಬದಿಂದ ಬಂದಿರುವಂತಹವನು. ಇದನ್ನು ಸರಿಪಡಿಸುವಂತಹ ಕಾರ್ಯ ಮಾಡುತ್ತೇವೆ. ತಾವು ಕೇಳಿರುವಂತಹ ಪ್ರಶ್ನೆ ಏನಿದೆ. ಸಹಾಯ ಧನವನ್ನು ಬಿಡುಗಡೆ ಮಾಡುವಂತಹ ಕಾರ್ಯ ಅದನ್ನು ಮಾಡಿಕೊಡುತ್ತೇವೆ. 100 ರೂಪಾಯಿಗಳನ್ನು ಕೊಡುವಂತಹ ಸಹಾಯ ಧನವನ್ನು ಕೊಡಿಸುತ್ತೇವೆ.

ಅಧ್ಯಕ್ಷರು: ಮಾನ್ಯ ಕಿಮ್ಮನೆ ರತ್ನಾಕರ್ ರವರ ಪ್ರಶ್ನೆ ವರ್ಗಾವಣೆಯಾಗಿದೆ

ಶ್ರೀ ಬಿ. ಎನ್. ಬಚ್ಚೇಗೌಡ: ಡಿ.ಪಿ.ಎ.ಆರ್.ಗೆ ವರ್ಗಾವಣೆಯಾಗಿದೆ

ನರ್ಸರಿಗಳ ಮಾಹಿತಿ

63 (193) ಶ್ರೀ ವಸಂತ ಬಂಗೇರ (ಬೆಳ್ತಂಗಡಿ): ಅರಣ್ಯ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅರಣ್ಯ ಇಲಾಖೆಯ ಅಧೀನದಲ್ಲಿರುವ ನರ್ಸರಿಗಳ ಸಂಖ್ಯೆ ಎಷ್ಟು?

ಆ) 2008 ರಿಂದ ಈವರೆಗೆ ಸದರಿ ನರ್ಸರಿಗಳಲ್ಲಿ ವಿವಿಧ ಜಾತಿಯ ಎಷ್ಟು ಗಿಡಗಳನ್ನು ಬೆಳೆಸಲಾಗಿದೆ; ಗಿಡಗಳನ್ನು ಬೆಳೆಸಲು ಎಷ್ಟು ಮೊತ್ತವನ್ನು ವ್ಯಯಿಸಲಾಗಿದೆ (ವಿವರ ನೀಡುವುದು).

ಇ) 2008 ರಿಂದ ಈವರೆಗೆ ಎಷ್ಟು ಗಿಡಗಳನ್ನು ರೈತರಿಗೆ ಮತ್ತು ಇತರರಿಗೆ ಉಚಿತವಾಗಿ ಹಂಚಲಾಗಿದೆ;

ಈ) ಇಲಾಖಾ ವತಿಯಿಂದ ಎಷ್ಟು ಗಿಡಗಳನ್ನು ಬೆಳಸಲಾಗಿದೆ; ಗಿಡಗಳನ್ನು ನೆಡಲು ಖರ್ಚಾಗಿರುವ ಮೊತ್ತವೆಷ್ಟು? ಕ್ಷೇತ್ರವಾರು ವಿವರ ನೀಡುವುದು?

ಶ್ರೀ ಸಿ. ಪಿ. ಯೋಗೀಶ್ವರ್ (ಅರಣ್ಯ ಸಚಿವರು):–

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅರಣ್ಯ ಇಲಾಖೆಯ ಅಧೀನದಲ್ಲಿರುವ ನರ್ಸರಿಗಳ ಸಂಖ್ಯೆ–16.

ಆ) ವಿವರಗಳನ್ನು ಅನುಬಂಧ–1ರಲ್ಲಿ ನೀಡಲಾಗಿದೆ

ಇ) ವಿವರಗಳನ್ನು ಅನುಬಂಧ–2ರಲ್ಲಿ ನೀಡಲಾಗಿದೆ.

ಈ) ವಿವರಗಳನ್ನು ಅನುಬಂಧ–3 ರಲ್ಲಿ ನೀಡಲಾಗಿದೆ.

ಮಂಗಳೂರು ವೃತ್ತ, ಮಂಗಳೂರು

ಅನುಬಂಧ – 1

2008ರಿಂದ ಈವರೆಗೆ ಸರ್ಕಾರಿಗಳಲ್ಲಿ ಬೆಳೆಸಲಾದ ವಿವಿಧ ಜಾತಿಯ ಗಿಡಗಳ ವಿವರ ಮತ್ತು ಗಿಡಗಳನ್ನು ಬೆಳೆಸಲು ವ್ಯಯಿಸಲಾದ ಮೊತ್ತವನ್ನು ತೋರಿಸುವ ಪತ್ರ.

ಕ್ರ ಸ	ಸಸ್ಯಕ್ಷೇತ್ರದ ಹೆಸರು	2008–09		2009–10		2010–11		2011–12 ಡಿಸೆಂಬರ್ ಅಂತ್ಯಕ್ಕೆ	
		ಬೆಳೆಸಿದ ಗಿಡಗಳು (ಸಂಖ್ಯೆಗಳಲ್ಲಿ)	ಬೆಳೆಸಲು ವ್ಯಯಿಸಲಾದ ಮೊತ್ತ (ರೂಪಾಯಿಗಳಲ್ಲಿ)	ಬೆಳೆಸಿದ ಗಿಡಗಳು (ಸಂಖ್ಯೆಗಳಲ್ಲಿ)	ಬೆಳೆಸಲು ವ್ಯಯಿಸಲಾದ ಮೊತ್ತ (ರೂಪಾಯಿಗಳಲ್ಲಿ)	ಬೆಳೆಸಿದ ಗಿಡಗಳು (ಸಂಖ್ಯೆಗಳಲ್ಲಿ)	ಬೆಳೆಸಲು ವ್ಯಯಿಸಲಾದ ಮೊತ್ತ (ರೂಪಾಯಿಗಳಲ್ಲಿ)	ಬೆಳೆಸಿದ ಗಿಡಗಳು (ಸಂಖ್ಯೆಗಳಲ್ಲಿ)	ಬೆಳೆಸಲು ವ್ಯಯಿಸಲಾದ ಮೊತ್ತ (ರೂಪಾಯಿಗಳಲ್ಲಿ)
I	ಮಂಗಳೂರು ವಿಭಾಗ								
1	ಪದವೀ	38,000		23,500		33,605		18,500	
2	ಕಂಬ್ರೂರು	161,500		183,000		240,110		74,860	
3	ಮುಂಡಾಜೆ ಕಾಮ	340,500		208,150		251,240		39,800	
4	ಉದನೆ	401,279	6,599,000	306,820	5,754,000	211,580	4,899,100	167,374	807,600
5	ಕನಕಮಜಲು	328,821		269,010		273,300		78,740	
6	ಯೆನಕಲ್	172,760		311,790		183,700		96,430	
7	ಮೇದಿನಡ್ಕ	144,100		115,500		100,840		125,620	
8	ಕಲ್ಲಾಜೆ	157,700		69,480		144,700		31,876	
	ಒಟ್ಟು	1,744,660	6,599,000	1,487,250	5,754,000	1,439,075	4,899,100	633,200	807,600
II	ಕುಂದಾಪುರ ವಿಭಾಗ								
9	ಅಳದಂಗಡಿ	316,840	2,439,690	142,100	352,521	161,967	758,245	98,256	495,118
10	ಕುತ್ಲೂರು	421,825		324,280	1,015,498	399,898	1,403,750	273,710	1,044,188
		738,665	2,439,690	466,380	1,368,019	561,865	2,161,995	371,966	1,539,306
III	ಕುದುರೆಮುಖ ವನ್ಯಜೀವಿ ವಿಭಾಗ ಶಾಖೆಗಳು								
11	ಶಿಶಿಲ			4,600	9,372	4,950	29,975		
IV	ಸಾಮಾಜಿಕ ಅರಣ್ಯ ಮಂಗಳೂರು.								
12	ಅಂಬಾಡಿ–ಕಟ್ಟಿಮುಡ್ನೂರು	153,400	379,000	71,100	235,000				
13	ಮುಕ್ಕ–ಕೆಂಪಾರ್ಲ	128,900	386,000	152,100	229,000				
14	ಅಲಂಕಾರು–ಮೂಡಿಗೆರೆ	105,200	276,000	105,000	202,000				
15	ಪಣ	184,100	887,000	334,700	475,400	61,700	–		
16	ಹಂಪ	28,200	192,000	27,000	174,000				
ಒಟ್ಟು		599,800	2,120,000	689,900	1,315,400	61,700	0	0	0
ಒಟ್ಟು ಮೊತ್ತ		3,083,125	11,158,690	2,648,130	8,446,791	2,062,640	7,061,095	1,005,166	2,346,906

ಮಂಗಳೂರು ವೃತ್ತ, ಮಂಗಳೂರು

ಅನುಬಂಧ - 2

ನರ್ಸರಿಗಳಲ್ಲಿ 2008-09 ರಿಂದ ಈವರೆಗೆ ಉಚಿತವಾಗಿ ನೀಡಲಾದ ಸಸಿಗಳ ವಿವರವನ್ನು ತೋರಿಸುವ ತಃಖ್ತೆ.

ಕ್ರ. ಸಂ	ವಿಭಾಗ	ನರ್ಸರಿ ಹೆಸರು	2008-09	2009-10	2010-11	2011-12
1	ಕುಂದಾಪುರ	ಕುತ್ಲೂರು	4800	5700	5900	6100
		ಅಳದಂಗಡಿ	0	0	0	5345
2	ಕುದುರೆಮುಖ ವನ್ಯಜೀವಿ ವಿಭಾಗ, ಕಾರ್ಕಳ	ತುಂಬೆ	20300	0	0	0
3	ಸಾಮಾಜಿಕ ಅರಣ್ಯ ಮಂಗಳೂರು.	ಅನಂತಾಡಿ-ನೆಟ್ಲಮುಡ್ನೂರು	69600	0	0	0
		ಮುಳ್ಳ-ಸೆರಿಮೊಗ್ರು	30000	0	8700	0
		ಅಲೆಟ್ಟಿ-ಮೇದಿಸಡ್ಕ	8000	0		0
		ಸಡ	32100	0	0	0
ಒಟ್ಟು ಮೊತ್ತ			**164800**	**5700**	**14600**	**11445**

ಅನುಬಂಧ- 3

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವರ್ಷವಾರು ಇಲಾಖಾವತಿಯಿಂದ ಬೆಳೆಸಿದ ಗಿಡಗಳು

ವರ್ಷ	ಗಿಡಗಳ ಸಂಖ್ಯೆ
2008–09	3083125
2009–10	2648130
2010–11	2062640
2011–12 ಡಿಸೆಂಬರ್ 2011ರ ಅಂತ್ಯದವರೆಗೆ	1005166

ಕ್ಷೇತ್ರವಾರು ಗಿಡಗಳನ್ನು ನೆಡಲು ಖರ್ಚಾದ ಹಣದ ವಿವರ

ಕ್ರ ಸಂ	ಕ್ಷೇತ್ರದ ಹೆಸರು	ನೆಡಲು ಖರ್ಚಾಗಿರುವ ಮೊತ್ತ – 2008–09		ನೆಡಲು ಖರ್ಚಾಗಿರುವ ಮೊತ್ತ – 2009–10		ನೆಡಲು ಖರ್ಚಾಗಿರುವ ಮೊತ್ತ – 2010–11		ನೆಡಲು ಖರ್ಚಾಗಿರುವ ಮೊತ್ತ – 2011–12 ಡಿಸೆಂಬರ್ 2011ರ ಅಂತ್ಯದವರೆಗೆ	
		ಹೆಕ್ಟೇರ್	ಮೊಬಲಗು (ಲಕ್ಷಗಳಲ್ಲಿ)	ಹೆಕ್ಟೇರ್	ಮೊಬಲಗು (ಲಕ್ಷಗಳಲ್ಲಿ)	ಹೆಕ್ಟೇರ್	ಮೊಬಲಗು (ಲಕ್ಷಗಳಲ್ಲಿ)	ಹೆಕ್ಟೇರ್	ಮೊಬಲಗು (ಲಕ್ಷಗಳಲ್ಲಿ)
1	ಮಂಗಳೂರು ಒಟ್ಟು	417.00	31.026	541.15	55.752	372.62	69.927	348.32	46.916
2	ಬಂಟ್ವಾಳ ಒಟ್ಟು	167.51	9.421	198.80	28.709	129.25	16.258	188.00	24.139
3	ಬೆಳ್ತಂಗಡಿ ಒಟ್ಟು	822.25	66.526	1,624.50	115.903	511.05	91.950	422.84	49.164
4	ಪುತ್ತೂರು ಒಟ್ಟು	580.00	39.078	1,014.75	97.748	637.70	87.791	427.50	54.891
5	ಸುಳ್ಯ ಒಟ್ಟು	547.00	31.979	797.50	87.891	390.00	50.811	614.50	66.092
	ಒಟ್ಟು	2,533.76	178.030	4,176.70	386.003	2,040.62	316.737	2,001.16	241.202

ಶ್ರೀ ವಸಂತ ಬಂಗೇರ ಕೆ.: ಮಾನ್ಯ ಅಧ್ಯಕ್ಷರೆ, ಅಂಕಿ–ಸಂಖ್ಯೆಗಳನ್ನು ಮಾನ್ಯ ಸಚಿವರು ಕೊಟ್ಟಿದ್ದಾರೆ. ವಾಸ್ತವವಾಗಿ ಅರಣ್ಯ ಇಲಾಖೆಯವರು ನರ್ಸರಿಗಳಲ್ಲಿ ಗಿಡಗಳನ್ನು ನೆಡುವುದಾಗಲಿ ಇನ್ನಿತರ ಸ್ಥಳಗಳಲ್ಲಿ ಗಿಡಗಳನ್ನು ನೆಡುವುದಾಗಲಿ ಬಹಳ ಮುತುವರ್ಜಿಯಿಂದ ಆ ಕೆಲಸವನ್ನು ಮಾಡುತ್ತಾರೆ. ಗ್ರಾಮ ಮಟ್ಟದಿಂದ ರಾಜ್ಯ ಮಟ್ಟದವರೆಗಿನ ಅಧಿಕಾರಿಗಳು ಕೂಡ ಬಹಳ ಮುತುವರ್ಜಿಯಿಂದ ಅಲ್ಲಿ ಕೆಲಸ ಮಾಡುತ್ತಾರೆ. ಕಾರಣವೇನೆಂದರೆ, ನೀವು ಕೊಟ್ಟ ಅಂಕಿ–ಸಂಖ್ಯೆಗಳಂತೆ ನಿಮ್ಮ ಇಲಾಖೆಯವರು ಅಲ್ಲಿ ಗಿಡಗಳನ್ನು ನೆಡುವುದಿಲ್ಲ. ಅಂಕಿಸಂಖ್ಯೆಗಳನ್ನು ಅವರು ಬರೆದುಕೊಟ್ಟಿದ್ದಾರೆ ಅದನ್ನು ನೀವು ಓದಿದ್ದೀರಿ. ಕೋಟಿಗಟ್ಟಲೆ ಹಣವನ್ನು ಲೂಟಿ ಮಾಡುತ್ತಾರೆ ಎಂಬ ವಿಚಾರ ನಮ್ಮ ಗಮನಕ್ಕೆ ಬಂದಿದೆ. ಈ ರೀತಿ ತಪ್ಪು ಮಾಹಿತಿಯನ್ನು ಕೊಡುವುದು ಸರಿಯಲ್ಲವೆಂಬ ವಿಚಾರವನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಸಿ. ಪಿ. ಯೋಗೀಶ್ವರ್: ಇಲಾಖೆಯ ಕಾರ್ಯಕ್ರಮಗಳ ರೀತಿಯಲ್ಲಿ ಆಯಾಯ ಜಿಲ್ಲೆಗಳಲ್ಲಿರುವ ನರ್ಸರಿಗಳಲ್ಲಿ ನಮ್ಮಲ್ಲಿರುವ ಅಧಿಕಾರಿಗಳು ಪ್ರಾಮಾಣಿಕವಾಗಿ ಗಿಡಗಳನ್ನು ನೆಟ್ಟು ಬೆಳೆಸುವಂತಹ ಕೆಲಸವನ್ನು ಮಾಡುತ್ತಿದ್ದಾರೆ. ನಮ್ಮಲ್ಲಿರುವ ಲೋಪವೇನೆಂದರೆ ನರ್ಸರಿಗಳಲ್ಲಿ ಗಿಡಗಳನ್ನು ಕೊಟ್ಟ ಮೇಲೆ ಮೂರು ವರ್ಷ ಮಾತ್ರ ನಾವು ನೋಡಿಕೊಳ್ಳುತ್ತೇವೆ. ಸಾರ್ವಜನಿಕರಿಗೆ ಗೊತ್ತಾಗಬೇಕಾದ ವಿಷಯವೇನೆಂದರೆ ಗಿಡಗಳನ್ನು ಕೊಡುವುದು ಮುಖ್ಯವಲ್ಲ. ಅದನ್ನು ಮೂರು ವರ್ಷ ಮಾತ್ರ ಅಲ್ಲ ಐದು ವರ್ಷಗಳವರೆಗೆ ಗಿಡಗಳನ್ನು ಬೆಳೆಸುವಂತ ಜವಾಬ್ದಾರಿಯನ್ನು ನಮ್ಮ ಇಲಾಖೆಯು ತೆಗೆದುಕೊಳ್ಳಬೇಕೆಂಬ ತೀರ್ಮಾನವನ್ನು ಅಧಿಕಾರಿಗಳು ಮತ್ತು ನಾವು ಚರ್ಚೆ ಮಾಡುತ್ತಿದ್ದೇವೆ. ತಮ್ಮ ನಿರ್ದಿಷ್ಟವಾದ ಆರೋಪವೇನೆಂದರೆ, ಸಾರ್ವಜನಿಕರು ಬೇರೆ ಬೇರೆ ಸಂಘ ಸಂಸ್ಥೆಗಳು ಗಿಡಿ ನೆಡುತ್ತಾರೆ. ಆದರೆ ಅರಣ್ಯ ಇಲಾಖೆ ಮಾಡುತ್ತಿಲ್ಲವೆಂಬುದು ತಮ್ಮ ಆರೋಪ. ಇದು ಸತ್ಯಕ್ಕೆ ದೂರವಾದುದು. ಕೆಲಸ ಕಾರ್ಯಗಳನ್ನು ನಮ್ಮ ಅಂಕಿ ಅಂಶಗಳ ಪ್ರಕಾರ ಬಹಳ ಪ್ರಾಮಾಣಿಕವಾಗಿ ಮಾಡುತ್ತಿದ್ದೇವೆ.

ಶ್ರೀ ವಸಂತ ಬಂಗೇರ ಕೆ.: ಸನ್ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಕೋಟಿಗಟ್ಟಲೆ ಗಿಡಗಳನ್ನು ಬೆಳೆಸುತ್ತಾರೆ. ಆ ಕೋಟಿಗಟ್ಟಲೆ ಗಿಡಗಳನ್ನೆಲ್ಲ ನೆಟ್ಟಿದ್ದೇವೆಂದು ಹೇಳುತ್ತಾರೆ, ಆದರೆ ನೆಡುವುದಿಲ್ಲ. ಉದಾಹರಣೆಗೆ ನನ್ನ ಕ್ಷೇತ್ರದಲ್ಲಿ ಲೋಡ್ ಗಟ್ಟಲೆ ಗಿಡಗಳನ್ನು ತೆಗೆದುಕೊಂಡು ಹೋಗಿ ಹೊಳೆಗೆ ಹಾಕಿದ್ದಾರೆ. ಆದರೆ ಆ ಎಲ್ಲಾ ಗಿಡಗಳನ್ನು ನೆಟ್ಟಿದ್ದೇವೆಂದು ಹೇಳುತ್ತಾರೆ. ಅಷ್ಟು

ಹಣವನ್ನು ಲಪಟಾಯಿಸುತ್ತಾರೆ. ಇದು ವಾಸ್ತವ ಸಂಗತಿ, ಮಾನ್ಯ ಅರಣ್ಯ ಸಚಿವರಿಗೆ ಗೊತ್ತಿದೆ, ನಾನು ಹೊಸದಾಗಿ ತಿಳಿಸುವಂಥದ್ದಲ್ಲ. ಈ ರೀತಿ ಮೋಸ ನಡೆಯಬಾರದು. ನಿಮ್ಮ ಇಲಾಖೆಯಲ್ಲಿ ಕೋಟ್ಯಾಂತರ ರೂಪಾಯಿಗಳ ಅವ್ಯವಹಾರವಾಗುತ್ತಿದೆ, ಲೂಟಿಯಾಗುತ್ತಿದೆ, ಇದನ್ನು ಯಾವ ರೀತಿಯಲ್ಲಿ ನಿಲ್ಲಿಸುತ್ತೀರಿ? ಒಂದು ವಿಚಾರವನ್ನು ನಾನು ನಿಮ್ಮ ಬಳಿ ಕೇಳುತ್ತಿದ್ದೇನೆ. ಇನ್ನು ಮುಂದೆಯಾದರೂ ಇದನ್ನು ಸಮಗ್ರವಾಗಿ ತನಿಖೆ ಮಾಡುತ್ತೀರಾ? ನಿಮಗೆ ಇಚ್ಛೆ ಇದ್ದರೆ ಸಮಗ್ರವಾಗಿ ತನಿಖೆ ಮಾಡಿ ಯಾರೆಲ್ಲಾ ಅಧಿಕಾರಿಗಳು ಇದರಲ್ಲಿ ಶಾಮೀಲಾಗಿದ್ದಾರೆ ಅವರೆಲ್ಲರ ಮೇಲೆ ಶಿಸ್ತು ಕ್ರಮವನ್ನು ಕಾನೂನು ರೀತಿಯ ಕ್ರಮಗಳನ್ನು ಕೈಗೊಳ್ಳಿ ಎಂದು ಕೇಳುತ್ತಿದ್ದೇನೆ.

ಶ್ರಿ ಸಿ. ಪಿ. ಯೋಗೀಶ್ವರ್: ಮಾನ್ಯ ಅಧ್ಯಕ್ಷರೆ, ಮಾನ್ಯ ಶ್ರೀ ವಸಂತ ಬಂಗೇರರವರ ನಿರ್ದಿಷ್ಟವಾದ ಯಾವುದಾದರೂ ಆಪಾದನೆ ಇದ್ದರೆ ಹೇಳಲಿ, ಆ ಬಗ್ಗೆ ನಾನು ತನಿಖೆ ಮಾಡಿ ಅವರಿಗೆ ಉತ್ತರವನ್ನು ಕೊಡುತ್ತೇನೆ.

ಅಧ್ಯಕ್ಷರು: ಆಯಿತು

ಪ್ರಶ್ನೆ ಸಂಖ್ಯೆ: 64 (557) (ಮಾನ್ಯ ಸದಸ್ಯರಾದ ಶ್ರೀ ಗೋಪಾಲಕೃಷ್ಣ ಬೇಳೂರುರವರು ಹಾಜರಿರಲಿಲ್ಲ)

ರಂಗಮಂದಿರ ಶಿಥಿಲವಾಗಿರುವ ಬಗ್ಗೆ

65 (12) ಶ್ರೀ ಕೃಷ್ಣಪ್ಪ ಎಂ.ಟಿ. (ತುರುವೇಕೆರೆ):– ಮಾನ್ಯ ಸಣ್ಣ ನೀರಾವರಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ದಯಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ತುರುವೇಕೆರೆ ತಾಲ್ಲೂಕು ದಂಡಿನಶಿವರ ಗ್ರಾಮದಲ್ಲಿರುವ ಬಯಲು ರಂಗಮಂದಿರವು ಶಿಥಿಲವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಹಾಗಿದ್ದಲ್ಲಿ, ಶಿಥಿಲವಾಗಿರುವ ರಂಗಮಂದಿರವನ್ನು ದುರಸ್ಥಿಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

ಶ್ರೀ ಗೋವಿಂದ ಎಂ. ಕಾರಜೋಳ (ಸಣ್ಣ ನೀರಾವರಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು):–

ಅ) ಬಂದಿದೆ.

ಆ) ಕಾಮಗಾರಿಯ ಅಂದಾಜುವೆಚ್ಚ ಪಟ್ಟಿ ಪಡೆದು ಸದರಿ ರಂಗಮಂದಿರವನ್ನು